## ಬಿಸಿಸಿಐಗೆ ಸಿಗುವ ಹಣ

ಪ್ರತಿವರ್ಷ ಅಂದಾಜು 1200 ಕೋಟಿ ರೂಪಾಯಿ ಆದಾಯ ಐಪಿಎಲ್‌ನಿಂದ ಬರುತ್ತದೆ. ಇದರಲ್ಲಿ ಬಿಸಿಸಿಐಗೆ ಶೇ. 40 ರಷ್ಟು ಲಾಭ ಸಿಗುತ್ತದೆ. 2007ರಲ್ಲಿ ಬಿಸಿಸಿಐಗೆ 235 ಕೋಟಿ ರೂ. ಲಾಭ ಸಿಕ್ಕಿತ್ತು. 2017 ರಲ್ಲಿ ಬಿಸಿಸಿಐ ಬೌಂಡರಿ ಲೈನಿನಲ್ಲಿನ ಜಾಹಿರಾತಿನಿಂದ ಒಟ್ಟು 250 ಕೋಟಿ ಗೂ ಹೆಚ್ಚಿನ ಲಾಭ ಸಿಕ್ಕಿತ್ತು. ಐಪಿಎಲ್ ಪಂದ್ಯಗಳು ಪ್ರೈಮ್ ಟೈಮ್‌ನಲ್ಲಿ ಪ್ರಸಾರವಾಗುತ್ತವೆ. 2008 ರಿಂದ 2017ರವರೆಗಿನ ಅವಧಿವರೆಗಿನ ನೇರ ಪ್ರಸಾರದ ಹಕ್ಕು ಸೋನಿ ಟಿವಿಗೆ ಇತ್ತು. ಈಗ ಸ್ಟಾರ್ ಸ್ಪೋರ್ಟ್ಸ್ ಪಡೆದುಕೊಂಡಿದೆ. ನೇರ ಪ್ರಸಾರ ಮಾಡುವ ಟಿವಿ ವಾಹಿನಿಯು ತನ್ನ ವಾರ್ಷಿಕ ವಹಿವಾಟಿನ ಶೇ 7ರಷ್ಟನ್ನು ಕೇವಲ ಐಪಿಎಲ್ ಟೂರ್ನಿಯಿಂದ ಗಳಿಸುವ ಅಂದಾಜು ಮಾಡಲಾಗಿದೆ.

‘ನಮ್ಮ ಹುಡುಗ ಶಾಲೆಯಿಂದ ಬಂದ ಕೂಡಲೇ ಊಟ ಮಾಡಿ ಟೇಬಲ್ ಟೆನಿಸ್ ಆಡೋಕೆ ಹೋಗ್ತಾನೆ. ಬರೋದು ಏಳ್ ಗಂಟೆ, ಆಮೇಲೆ ಹೋಮ್ ವರ್ಕ್ ಮಾಡಿ ಮಲಗಿಕೊಳ್ತಾನೆ..’

‘ನಮ್ಮ ಮಗಳನ್ನ ಬ್ಯಾಡ್ಮಿಂಟನ್ ಆಡೋಕೆ ಸೇರಿಸಿದ್ದೇವೆ. ಈಗಿನ ಕಾಲದಲ್ಲಿ ಓದಿನ ಜೊತೆಗೆ ಕರಿಕ್ಯೂಲಮ್ ಕೂಡ ಮುಖ್ಯ. ಅಷ್ಟಕ್ಕೂ ಮುಂದೆ ಒಳ್ಳೆ ಆಟಗಾರ್ತಿಯಾದರೆ ಲೈಫ್ ಸೆಟ್ಲ್ ಆಗತ್ತಲ್ವಾ..’

‘ಓದೋದು ಒಂದು ಭಾಗ. ಕ್ರಿಕೆಟ್ ಮತ್ತೊಂದು ಭಾಗ. ಆದ್ದರಿಂದ ನಮ್ಮ ಇಬ್ಬರೂ ಮಕ್ಕಳನ್ನ ಕ್ರಿಕೆಟ್ ಅಕಾಡೆಮಿಗೆ ಹಾಕಿದ್ದೇನೆ. ಇವತ್ತು ಕ್ರಿಕೆಟ್‌ನಲ್ಲೂ ಭವಿಷ್ಯ ರೂಪಿಸಿಕೊಳ್ಳಬಹುದು. ಸ್ಪರ್ಧೆ ಎಲ್ಲ ಕಡೆಯೂ ಇದೆ. ಚಿಕ್ಕ ವಯಸ್ಸಿನಲ್ಲಿ ಹೆಚ್ಚು ಶ್ರಮ ಪಟ್ಟರೆ ಮುಂದಿನ ಜೀವನ ಸುಖವಾಗಿರುತ್ತದೆ’

–ಈ ಕಾಲದ ಬಹುತೇಕ ಅಪ್ಪ–ಅಮ್ಮಂದಿರ ಮಾತುಗಳಿವು. ಕ್ರೀಡಾ ಟೂರ್ನಿಗಳು ನಡೆಯುವ ಜಾಗದಲ್ಲಿ ಸೇರುವ ಪಾಲಕರ ಮಧ್ಯೆ ಇಂತಹ ಮಾತುಗಳು ಈಗ ಸಹಜವಾಗುತ್ತಿವೆ. ದಶಕದ ಹಿಂದೆ ಆಡುವ ಮಕ್ಕಳನ್ನು ಎಳೆದು ತಂದು ಓದು.. ಓದು.. ಎಂದು ಕಿವಿ ಹಿಂಡುತ್ತಿದ್ದ ಅಪ್ಪ–ಅಮ್ಮಂದಿರು ಈಗ ಕಡಿಮೆಯಾಗುತ್ತಿದ್ದಾರೆ. ಏಕೆಂದರೆ ಆಟದಲ್ಲಿಯೂ ಜೀವನ ರೂಪಿಸಿಕೊಳ್ಳುವ ಅವಕಾಶಗಳು ಈಗ ಹೆಚ್ಚಿವೆ. ಪ್ರೀಮಿಯರ್ ಲೀಗ್ ಟೂರ್ನಿಗಳ ಭರಾಟೆಯಿಂದಾಗಿ ಕೋಟಿಗಟ್ಟಲೇ ಹಣ ಕ್ರೀಡೆಗಳಲ್ಲಿ ಹರಿಯುತ್ತಿದೆ.

18–20 ವರ್ಷದ ಕ್ರಿಕೆಟಿಗರು ಕೋಟ್ಯಂತರ ರೂಪಾಯಿಗಳ ಒಡೆಯರಾಗುತ್ತಿದ್ದಾರೆ. ಬ್ಯಾಡ್ಮಿಂಟನ್, ಟೆನಿಸ್, ಕಬಡ್ಡಿ, ಕುಸ್ತಿ, ಚೆಸ್, ಫುಟ್‌ಬಾಲ್, ಬ್ಯಾಸ್ಕೆಟ್‌ಬಾಲ್, ಹಾಕಿ ಕ್ರೀಡೆಗಳಲ್ಲಿಯೂ ಈಗ ಝಣ ಝಣ ಕಾಂಚಾಣ ಕುಣಿಯುತ್ತಿದೆ. ಕಾರ್ಪೊರೇಟ್ ಸಂಸ್ಥೆಗಳು, ಸರ್ಕಾರಗಳು ಕ್ರೀಡೆಗಳಲ್ಲಿ ದುಡ್ಡು ಹಾಕಲು ಮುಂದೆ ಬರುತ್ತಿವೆ. ಮಾಧ್ಯಮಗಳು ಪ್ರಚಾರ ನೀಡಲು ತುದಿಗಾಲಿನಲ್ಲಿ ನಿಂತಿವೆ.

ತಮ್ಮ ಮಕ್ಕಳು ಉತ್ತಮ ಸಂಪಾದನೆ ಮಾಡಿ ಜೀವನದಲ್ಲಿ ಸುಖವಾಗಿರಲಿ ಎಂದು ಬಯಸುವ ಬಹುತೇಕ ಅಪ್ಪ–ಅಮ್ಮಂದಿರು ಕ್ರೀಡೆಯತ್ತ ಚಿತ್ತ ಹರಿಸಲು ಕಾರಣವಾಗಿದೆ. ಇವತ್ತು ಆಟಗಳು ಕೇವಲ ಆರೋಗ್ಯ ರಕ್ಷಣೆಯ ಮಾಧ್ಯಮವಾಗಿ ಉಳಿದಿಲ್ಲ. ಅದು ಹೊಸ ಪೀಳಿಗೆಯ ಭವಿಷ್ಯದ ದಾರಿಯೂ ಆಗತೊಡಗಿದೆ.

‘ಭಾಗವಹಿಸುವುದು ಮುಖ್ಯ,ಗೆಲುವಲ್ಲ’ ಎಂಬ ಮಾತೂ ಸವಕಲಾಗಿದೆ. ಏನಿದ್ದರೂ ಗೆಲ್ಲಲೇಬೇಕು ಎಂಬ ಮನೋಭಾವದಿಂದ ಕ್ರೀಡೆಯಲ್ಲಿ ಪೈಪೋಟಿ ಹೆಚ್ಚಿದೆ. ಸ್ಪರ್ಧೆ ಬೆಳೆದಂತೆ ಆಟಗಳು ರೋಚಕಗೊಳ್ಳುತ್ತಿವೆ. ನಿಯಮಗಳು ರೂಪಾಂತರಗೊಳ್ಳುತ್ತಿವೆ. ಟಿವಿ ಚಾನೆಲ್‌ಗಳ ಪ್ರೈಮ್ ಟೈಮ್‌ನ ಪ್ರಮುಖ ಮನರಂಜನೆಯಾಗುತ್ತಿವೆ. ಇದೆಲ್ಲದರ ಒಟ್ಟು ಮೊತ್ತವಾಗಿ ಕ್ರೀಡಾಲೋಕ ದೊಡ್ಡ ಉದ್ಯಮವಾಗಿ ಬೆಳೆಯುತ್ತಿದೆ. ಅದರಲ್ಲೂ ಬೆಂಗಳೂರಿನಂತಹ ಮಹಾನಗರಿಯು ಕ್ರೀಡೆಗಳ ಸ್ವರ್ಗಸ್ಥಾನವಾಗುತ್ತಿದೆ.

### ಪ್ರೀಮಿಯರ್ ಲೀಗ್‌ಗಳ ಅಬ್ಬರ

ಯುರೋಪ್ ದೇಶಗಳಲ್ಲಿ ಫುಟ್‌ಬಾಲ್ ಪ್ರೀಮಿಯರ್ ಲೀಗ್ ಮತ್ತು ಅಮೆರಿಕದ ಎನ್‌ಬಿಎ ಬ್ಯಾಸ್ಕೆಟ್‌ಬಾಲ್ ಲೀಗ್‌ಗಳು ಆರಂಭವಾಗಿ ದಶಕಗಳೇ ಉರುಳಿವೆ. ಇವತ್ತಿಗೂ ಇಡೀ ವಿಶ್ವದಲ್ಲಿ ಎನ್‌ಬಿಎ ಲೀಗ್ ಆಟಗಾರರೇ ಅತ್ಯಂತ ಹೆಚ್ಚು ಸಂಭಾವನೆ ಗಳಿಸುತ್ತಾರೆ. ಇತ್ತೀಚೆಗೆ ಭಾರತದ ಸತ್ನಾಮ್ ಸಿಂಗ್ ಮತ್ತು ಭುಲ್ಲರ್ ಅವರೂ ಎನ್‌ಬಿಎ ತಂಡಗಳಿಗೆ ಆಯ್ಕೆಯಾಗಿದ್ದಾರೆ. ಅದರಿಂದಾಗಿ ಇಲ್ಲಿಯೂ ಬ್ಯಾಸ್ಕೆಟ್‌ಬಾಲ್ ಕ್ರೀಡೆಗೆ ಉತ್ತೇಜನ ಹೆಚ್ಚುತ್ತಿದೆ.

ಭಾರತದಲ್ಲಿ ಲೀಗ್ ಟೂರ್ನಿಗಳು ಆರಂಭವಾಗಿದ್ದು ಕಳೆದ ದಶಕದಲ್ಲಿ. ಅದೂ ಕ್ರಿಕೆಟ್ ಮೂಲಕ. ಈ ಆಟಕ್ಕೆ ಕೋಟಿ ಕೋಟಿ ಅಭಿಮಾನಿಗಳು ಇರುವ ದೇಶದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಚಿನ್ನದ ಮೊಟ್ಟೆಗಳನ್ನು ಇಡುವ ಕೋಳಿಯಾಗಿ ಬೆಳೆದಿದೆ. 2008ರಲ್ಲಿ ಲಲಿತ್ ಮೋದಿ ಮತ್ತು ಬಿಸಿಸಿಐ ಸೇರಿ ಆರಂಭಿಸಿದ ಐಪಿಎಲ್ ಇವತ್ತು ₹ 34 ಸಾವಿರ ಕೋಟಿ ವ್ಯವಹಾರದ ದೊಡ್ಡ ಉದ್ಯಮವಾಗಿ ಬೆಳೆದಿದೆ. 2012–13ನೇ ಸಾಲಿನಿಂದ ಈಚೆಗೆ ಈ ಸಾಲಿಗೆ ಗ್ರಾಮೀಣ ಕ್ರೀಡೆ ಕಬಡ್ಡಿ, ಹಾಕಿ, ಫುಟ್‌ಬಾಲ್, ವಾಲಿಬಾಲ್, ಬ್ಯಾಡ್ಮಿಂಟನ್, ಟೆನಿಸ್ ಪ್ರೀಮಿಯರ್ ಲೀಗ್‌ಗಳು ದಾಂಗುಡಿ ಇಟ್ಟವು.





ಬ್ಯಾಡ್ಮಿಂಟನ್ ತಾರೆ ಪಿ.ವಿ.ಸಿಂಧು